REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 32 । ಸಂಚಿಕೆ : 26 । 01 ಅಕ್ಟೋಬರ್ 2025 । ಬುಧವಾರ । ಪುಟಗಳು : 8 । ಬೆಲೆ : 2/-

## ಮಹಾಮಂಡಳದ 60ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆ




ಬೆಂಗಳೂರು: ದಿನಾಂಕ: 25.09.2025ರಂದು ಕೆ.ಎಚ್. ಪಾಟೀಲ ಸಭಾಂಗಣದಲ್ಲಿ ಜರುಗಿದ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ 60ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು ಹಾಗೂ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ.ಪಾಟೀಲರು ಉದ್ಘಾಟಿಸಿ ಮಾತನಾಡಿ ಕಳೆದ 2–3 ವರ್ಷಗಳಿಂದ ಪಟ್ಟಣ ಸಹಕಾರ ಬ್ಯಾಂಕುಗಳು ಉತ್ತಮ ಪ್ರಗತಿ ಸಾಧಿಸುತ್ತಿರುವುದು ಹೆಮ್ಮೆಯ ವಿಷಯ.2024–25ನೇ ಸಾಲಿನಲ್ಲಿ ಕೆಲವು ಪ್ರಮುಖ ಘಟನೆಗಳನ್ನು ತಮಗೆ ತಿಳಿಸಲು ಇಚ್ಛೇಪಡುತ್ತೇನೆ.

ಇನ್ನು ಮುಂದೆ ಯಾವುದೇ ಅವಧಿಯಲ್ಲಿಯೂ ನಿರ್ದೇಶಕ ಸ್ಥಾನ ಖಾಲಿಯಾದಲ್ಲಿ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸದೇ ತಮ್ಮ ಬ್ಯಾಂಕಿನ ಆಡಳಿತ ಮಂಡಳಿ ಸಭೆಯಲ್ಲಿ ನಿರ್ದೇಶಕರನ್ನು ಕೋ–ಆಪ್ಟ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಈಗಾಗಲೇ ಪಟ್ಟಣ ಸಹಕಾರ ಬ್ಯಾಂಕಿನ ಆಡಳಿತ ಮಂಡಳಿಗೆ Reservation ಇದ್ದು, ಅದೇ Reservation ಮುಂದುವರೆಯುತ್ತದೆ. ಪದಾಧಿಕಾರಿಗಳಿಗೆ Reservation ಇರುವುದಿಲ್ಲ. ಪಟ್ಟಣ ಸಹಕಾರ ಬ್ಯಾಂಕುಗಳು ಸರ್ಕಾರದ ಆರ್ಥಿಕ ನೆರವು ಪಡೆದಿದ್ದರೂ ಸಹ ತಮ್ಮ ಬ್ಯಾಂಕಿನ ಆಡಳಿತ ಮಂಡಳಿಗೆ ಸರ್ಕಾರದ ನಾಮಿನೇಷನ್ ಇರುವುದಿಲ್ಲ. ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಈಗಿರುವ C.A. ಅಡಿಟ್ ವ್ಯವಸ್ಥೆ ಮುಂದುವರೆಯುತ್ತದೆ. ರಾಜ್ಯ ಸರ್ಕಾರದಿಂದ ಅಡಿಟ್ ವ್ಯವಸ್ಥೆ ತಮಗೆ ಇರುವುದಿಲ್ಲ. ಸಹಕಾರ ಸಂಘಗಳು ಮತ್ತು ಸೌಹಾರ್ದ ಸಂಘಗಳು ತಮ್ಮ RFD Statutory Reserve Fund ಶೇ.20ರಷ್ಟು ಅಪೆಕ್ಸ್ / ಡಿಸಿಸಿ ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಹೂಡಿಕೆಗೆ ಅವಕಾಶ ಕಲ್ಪಿಸಲಾಗಿದೆ.

ರಾಷ್ಟ್ರ ಮಟ್ಟದಲ್ಲಿ Umbrella Organisation NUCFDC (National Urban Cooperative Finance and Development Corporation) ಸಂಸ್ಥೆಯು ಈಗಾಗಲೇ ಸ್ಥಾಪನೆಗೊಂಡು ಸುಮಾರು ರೂ.235.71 ಕೋಟಿ ರೂಪಾಯಿ ಷೇರು ಧನ ಸಂಗ್ರಹಿಸಿದ್ದು, ಮಹಾರಾಷ್ಟ್ರ ರೂ.143.56ಕೋಟಿ, ಗುಜರಾತ ರೂ.47.86 ಕೋಟಿ ಮತ್ತು ಕರ್ನಾಟಕದಿಂದ ರೂ.12.46 ಕೋಟಿ ಸಂಗ್ರಹವಾಗಿರುತ್ತದೆ. ಈ ಸಂಸ್ಥೆಯಿಂದ Common Software, Liquidation Support, Non SLR Investment, Professional Training, Investment Support ಇನ್ನು ಅನೇಕ ಸೌಲಭ್ಯಗಳು ಸಿಗುತ್ತವೆ. ನಮ್ಮ ರಾಜ್ಯದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳು ಒಟ್ಟು ತಮ್ಮ ಬ್ಯಾಂಕಿನ ಠೇವಣಿಗೆ ಪ್ರತಿ ರೂ.100/–ಗಳಿಗೆ ಶೇ.0.15 ಪೈಸೆಯಂತೆ ಷೇರು ಧನ ಪಾವತಿಸಿ ಸದಸ್ಯತ್ವ ಪಡೆದುಕೊಳ್ಳಬೇಕೆಂದು ತಮ್ಮನ್ನು ಕೋರುತ್ತೇನೆ.

ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಯ ತಾಲ್ಲೂಕು ನೋಂದಣಾಧಿಕಾರಿಗಳು ಬ್ಯಾಂಕುಗಳಿಗೆ ಸಾಲ ವಸೂಲಾತಿಗಾಗಿ ಸಾಲಗಾರರ

3ನೇ ಪುಟಕ್ಕೆ...

ದಿ ಬೈಲಹೊಂಗಲ ಅರ್ಬನ್ ಕೋ–ಆಪ್ ಬ್ಯಾಂಕಿನ 100ನೇ ವಾರ್ಷಿಕ ಮಹಾಸಭೆ 5
ಸಿದ್ಧಗಂಗಾ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ 32ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆ 6
ನಿಮ್ಮ ಪ್ರಶ್ನೆ – ನಮ್ಮ ಉತ್ತರ 7

## ಸಂಪಾದಕೀಯ

### ಆತ್ಮೀಯ ಸಹಕಾರಿಗಳೇ...



### ತೆರಿಗೆ ಇಳಿಕೆಯ ಲಾಭ ಜನರಿಗೆ ತಲುಪುವಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಕೇಂದ್ರ ಸರ್ಕಾರದಾಗಿದೆ

ಕೇಂದ್ರ ಸರ್ಕಾರವು 2017ರಲ್ಲಿ ಸರಕು ಮತ್ತು ಸೇವಾ ತೆರಿಗೆಯನ್ನು ಜಾರಿಗೆ ತರುವ ಮೂಲಕ ದೇಶದ ಜನರಿಗೆ ಆಘಾತ ನೀಡಿತ್ತು. ಇದನ್ನು ಆರ್ಥಿಕತೆಯನ್ನು ಬಲಪಡಿಸುವ ಮಹತ್ವದ ಹೆಜ್ಜೆ ಎಂದು ಹೇಳಲಾಗಿತ್ತು. ಹಲವು ಹಂತಗಳ ಅಧಿಕ ತೆರಿಗೆ ವಿಧಿಸುವ ಜಿಎಸ್‌ಟಿ ಪರಿಷ್ಕರಣೆ ಮಾಡುವಂತೆ ಅಂದಿನಿಂದ ದೇಶದ ಜನ ಹಾಗೂ ಆರ್ಥಿಕ ತಜ್ಞರು ಒತ್ತಾಯಿಸುತ್ತಲೇ ಇದ್ದರು. ಯಾರ ಮಾತುಗಳಿಗೂ ಕಿವಿ ಕೊಡದ ಕೇಂದ್ರ ಸರ್ಕಾರ, ತೆರಿಗೆ ಪ್ರಕ್ರಿಯೆಯನ್ನು ಸರಳಗೊಳಿಸಿ ಪಾರದರ್ಶಕತೆಯನ್ನು ಹೆಚ್ಚಿಸುವ ಮತ್ತು ತೆರಿಗೆ ಹೊರೆಯನ್ನು ಕಡಿಮೆ ಮಾಡುವ ಮಹತ್ವದ ಸುಧಾರಣೆಯಾಗಿ, ಜಿಎಸ್‌ಟಿ 2.0 ಅನ್ನು ಜಾರಿಗೆ ತಂದಿದೆ. ಆ ಮೂಲಕ ಜಾಗತಿಕ ಮಾರುಕಟ್ಟೆಗಳಲ್ಲಿ ನಮ್ಮ ದೇಶದ ಸ್ಪರ್ಧಾತ್ಮಕತೆಯನ್ನು ಬಲಪಡಿಸುವುದು, ದೇಶದ ಆರ್ಥಿಕತೆಗೆ ಬಲ ತುಂಬುವುದು ಹಾಗೂ ಗ್ರಾಹಕರಿಗೆ ಅಗ್ಗದ ಸರಕು ಮತ್ತು ಸೇವೆಗಳನ್ನು ಒದಗಿಸಲಾಗುವುದು ಎಂದು ಹೇಳಿಕೊಂಡಿದೆ. ಆದರೆ, ತೆರಿಗೆ ಕಡಿತದ ಪ್ರಯೋಜನಗಳನ್ನು ಉದ್ಯಮಿಗಳು ಗ್ರಾಹಕರಿಗೆ ನೀಡುತ್ತವೆಯೇ ಅಥವಾ ಸದ್ದಿಲ್ಲದೆ ಆ ಲಾಭವನ್ನು ತಮ್ಮ ತಿಜೋರಿ ತುಂಬಿಕೊಳ್ಳುತ್ತವೆಯೇ ಎನ್ನುವುದನ್ನು ಮುಂದಿನ ದಿನಗಳಲ್ಲಿ ಕಾದು ನೋಡಬೇಕಿದೆ.

ನೀವೆಲ್ಲ ಗಮನಿಸಿರಬಹುದು; ಆರ್‌ಬಿಐ ರೆಪೊ ದರವನ್ನು ಇಳಿಸಿದಾಗಲೆಲ್ಲ, ಇದರ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸುವಂತೆ ಹೇಳುತ್ತಲೇ ಇರುತ್ತದೆಯಾದರೂ ಬ್ಯಾಂಕುಗಳು ಅದನ್ನು ಜಾರಿಗೊಳಿಸುವುದಿಲ್ಲ. ಒಂದು ವೇಳೆ ಬಡ್ಡಿ ದರ ಇಳಿಸಿದರೂ, ರೆಪೊ ದರ ಇಳಿಕೆಗೆ ಅನುಗುಣವಾಗಿ ಜಾರಿಯಾಗುವುದಿಲ್ಲ. ಇದೇ ರೀತಿಯಾದ ಆತಂಕ ಜಿಎಸ್‌ಟಿ 2.0ರ ಬಗೆಯೂ ಜನರಲ್ಲಿದೆ. ಕಾರಣ ಜಿಎಸ್‌ಟಿ–2 ಅನ್ವಯ ದರ ಕಡಿತಗೊಂಡ ಉತ್ಪನ್ನದ ಮೂಲ ಬೆಲೆಯನ್ನೇ ಕಂಪನಿಗಳು ಏರಿಕೆ ಮಾಡಿದರೆ, ಗ್ರಾಹಕರಿಗೆ ತೆರಿಗೆ ದರ ಇಳಿಕೆಯ ಅನುಭವಕ್ಕೆ ಬರುವುದು ಹೇಗೆ ಸಾಧ್ಯ.

ಈಗಾಗಲೇ ರಾಜ್ಯದ ಹೋಟೆಲ್‌ಗಳ ಮಾಲೀಕರು ಸಿಲಿಂಡರ್‌ಗಳ ಹಾಗೂ ಯಾವುದೇ ಅಗತ್ಯ ವಸ್ತುಗಳ ಬೆಲೆ ಇಳಿಕೆಯಾಗದೆ ಇರುವುದರಿಂದ ಜಿಎಸ್‌ಟಿ ದರ ಕಡಿತದ ಪ್ರಯೋಜನಗಳನ್ನು ಗ್ರಾಹಕರಿಗೆ ವರ್ಗಾಯಿಸಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದೆ.

ಅದೆಲ್ಲ ಹೇಗೆ ಇರಲಿ, ಈ ಎಂಟು ವರ್ಷಗಳಲ್ಲಿ ದೇಶದ ಆರ್ಥಿಕತೆಗೆ ಆಗಿರುವ ಹಾನಿಯೂ ಅಪಾರವಾಗಿದ್ದು, ಅನೇಕ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ತತ್ತರಿಸಿ ಮುಚ್ಚಿ ಹೋಗಿದ್ದರೆ, ಯುವ ಜನರು ನಿರುದ್ಯೋಗದಿಂದ ಹತಾಶರಾಗೊಂಡಿದ್ದಾರೆ. ಮಧ್ಯಮ ವರ್ಗ ಆರ್ಥಿಕ ಪರಿಸ್ಥಿತಿ ಹದಗೆಟ್ಟು ಹೋಗಿದೆ. ಈ ಎಲ್ಲದರಿಂದ ದೇಶ ಆರ್ಥಿಕತೆಗೆ ಬಿದ್ದಿರುವ ಹೊಡೆತಕ್ಕೆ ಹಾಗೂ ಆಗಿರುವ ನಷ್ಟಕ್ಕೆ ಹೊಣೆ ಎನ್ನುವುದು ಯಾರು, ಉತ್ತರಿಸುವವರು ಯಾರು?

ಜಿಎಸ್‌ಟಿ 2.0ರ ತೆರಿಗೆ ಲಾಭ ಜನರಿಗೆ ತಲುಪಿದೆಯೇ ಎನ್ನುವುದನ್ನು ಖಚಿತಪಡಿಸಲು ರಾಷ್ಟ್ರೀಯ ಲಾಭಕೋರತನ ನಿಗ್ರಹ ಪ್ರಾಧಿಕಾರ ಇದ್ದರೂ, ಇದರ ಸಾಮರ್ಥ್ಯ ಸೀಮಿತ ಮಟ್ಟದಲ್ಲಿದೆ ಎನ್ನುವುದನ್ನು ಇಲ್ಲಿ ಗಮನಿಸಬೇಕಿದೆ. ಆದ್ದರಿಂದ ತೆರಿಗೆ ಇಳಿಕೆಯ ಲಾಭ ಜನರಿಗೆ ತಲುಪುವಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಕೇಂದ್ರ ಸರ್ಕಾರದಾಗಿದೆ ಎಂದು ನಾನು ಹೇಳ ಬಯಸುತ್ತೇನೆ.

▸▸ ಎಚ್.ಕೆ. ಪಾಟೀಲ

## ತೆರಿಗೆ ಲೆಕ್ಕಪರಿಶೋಧನಾ ವರದಿ ಸಲ್ಲಿಕೆಗೆ ಗಡುವು ವಿಸ್ತರಣೆ

**ನವದೆಹಲಿ:** 2024–25ನೇ ಹಣಕಾಸು ವರ್ಷದ ಲೆಕ್ಕಪರಿಶೋಧನಾ ವರದಿಗಳನ್ನು ಸಲ್ಲಿಸಲು ಇದ್ದ ಗಡುವನ್ನು ಆದಾಯ ತೆರಿಗೆ ಇಲಾಖೆ ಸೆ.25 ರಂದು ಒಂದು ತಿಂಗಳವರೆಗೆ ವಿಸ್ತರಿಸಿದೆ.

ಆದಾಯ ತೆರಿಗೆ ರಿಟರ್ನ್ ಫೈಲಿಂಗ್ ಪೋರ್ಟಲ್ ಸುಗಮವಾಗಿ ಕಾರ್ಯನಿರ್ವಹಿಸುತ್ತಿದೆ ಮತ್ತು ಸೆಪ್ಟೆಂಬರ್ 23, 2025 ರವರೆಗೆ 7.57 ಕೋಟಿಗೂ ಹೆಚ್ಚು ಐಟಿಆರ್‌ಗಳನ್ನು ಸಲ್ಲಿಸಲಾಗಿದೆ ಎಂದು ಕೇಂದ್ರ ನೇರ ತೆರಿಗೆ ಮಂಡಳಿ (ಸಿಬಿಡಿಟಿ) ಹೇಳಿಕೆಯಲ್ಲಿ ತಿಳಿಸಿದೆ.

ಸೆಪ್ಟೆಂಬರ್ 24 ರವರೆಗೆ, ಸುಮಾರು 4.02 ಲಕ್ಷ ತೆರಿಗೆ ಲೆಕ್ಕಪರಿಶೋಧನಾ ವರದಿಗಳನ್ನು ಅಪ್‌ಲೋಡ್ ಮಾಡಲಾಗಿದೆ ಮತ್ತು ಅವುಗಳಲ್ಲಿ 60,000ಕ್ಕೂ ಹೆಚ್ಚು ಸೆಪ್ಟೆಂಬರ್ 24 ರಂದು ಮಾತ್ರ ಅಪ್‌ಲೋಡ್ ಮಾಡಲಾಗಿದೆ.

ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಗಳು ಸೇರಿದಂತೆ ವಿವಿಧ ವೃತ್ತಿಪರ ಸಂಘಗಳಿಂದ ಪ್ರಾತಿನಿಧ್ಯಗಳನ್ನು ಸ್ವೀಕರಿಸಲಾಗಿದೆ ಎಂದು ಸಿಬಿಡಿಟಿ ಹೇಳಿದೆ. ಇದು ತೆರಿಗೆದಾರರು ಮತ್ತು ವೃತ್ತಿಪರರು ಆಡಿಟ್ ವರದಿಯನ್ನು ಸಕಾಲಿಕವಾಗಿ ಪೂರ್ಣಗೊಳಿಸುವಲ್ಲಿ ಎದುರಿಸುತ್ತಿರುವ ಕೆಲವು ತೊಂದರೆಗಳನ್ನು ಎತ್ತಿ ತೋರಿಸುತ್ತದೆ.

ಈ ಪ್ರಾತಿನಿಧ್ಯಗಳಲ್ಲಿ ಉಲ್ಲೇಖಿಸಲಾದ ಕಾರಣಗಳಲ್ಲಿ ದೇಶದ ಕೆಲವು ಭಾಗಗಳಲ್ಲಿ ಪ್ರವಾಹ ಮತ್ತು ನೈಸರ್ಗಿಕ ವಿಕೋಪಗಳಿಂದ ಉಂಟಾದ ಅಡಚಣೆಗಳು ಸೇರಿವೆ, ಇದು ಸಾಮಾನ್ಯ ವ್ಯವಹಾರ ಮತ್ತು ವೃತ್ತಿಪರ ಚಟುವಟಿಕೆಗೆ ಅಡ್ಡಿಯಾಗಿದೆ. ಈ ವಿಷಯವು ಹೈಕೋರ್ಟ್‌ಗಳ ಮುಂದೆಯೂ ಬಂದಿದೆ.

ಆದಾಗ್ಯೂ, ತೆರಿಗೆ ವೃತ್ತಿಪರರ ಪ್ರಾತಿನಿಧ್ಯ ಮತ್ತು ಗೌರವಾನ್ವಿತ ನ್ಯಾಯಾಲಯಗಳ ಮುಂದೆ ಅವರು ಸಲ್ಲಿಸಿದ ಸಲ್ಲಿಕೆಗಳನ್ನು ಗಮನದಲ್ಲಿಟ್ಟುಕೊಂಡು, ಹಿಂದಿನ ವರ್ಷ 2024–25 (ಮೌಲ್ಯಮಾಪನ ವರ್ಷ 2025–26) ಗಾಗಿ ಆದಾಯ-ತೆರಿಗೆ ಕಾಯ್ದೆ, 1961 ರ ಯಾವುದೇ ನಿಬಂಧನೆಯ ಅಡಿಯಲ್ಲಿ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸಲು 'ನಿಗದಿತ ದಿನಾಂಕ'ವನ್ನು ಸೆಪ್ಟೆಂಬರ್ 30, 2025 ರಿಂದ ಅಕ್ಟೋಬರ್ 31, 2025 ರವರೆಗೆ ವಿಸ್ತರಿಸಲಾಗಿದೆ ಕೇಂದ್ರ ನೇರ ತೆರಿಗೆ ಮಂಡಳಿ (ಸಿಬಿಡಿಟಿ) ಹೇಳಿಕೆಯಲ್ಲಿ ತಿಳಿಸಿದೆ.

# ಮಹಾಮಂಡಳದ ಸರ್ವಸದಸ್ಯರ ವಾರ್ಷಿಕ ಮಹಾಸಭೆ

....1ನೇ ಪುಟದಿಂದ

ಆಸ್ತಿಗಳ ಉತಾರ ಪೂರೈಸಲು ಅಧಿಕಾರಿಗಳು ನಿರಾಕರಿಸುತ್ತಿದ್ದು, ಅಭಿವೃದ್ಧಿ ಶುಲ್ಕದ ಬಗ್ಗೆ ಗೊಂದಲ ಇದ್ದು, ಎರಡನೇಯದಾಗಿ ಆಸ್ತಿ ಮೇಲೆ ಭೋಜಾ ಇದ್ದಾಗ್ಯೂ ಅಂತಹ ಆಸ್ತಿಗಳನ್ನು ಬ್ಯಾಂಕುಗಳ ಗಮನಕ್ಕೆ ತರದೇ ಪರಭಾರೆ ಮಾಡಲಾಗುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಈ ಎರಡು ವಿಷಯಗಳ ಬಗ್ಗೆ ಕಂದಾಯ ಸಚಿವರೊಂದಿಗೆ ನಾನು ಚರ್ಚಿಸಿ ಕ್ರಮವಿಡುತ್ತೇವೆ ಎಂದರು.

ಇತ್ತೀಚೆಗೆ ಕೇಂದ್ರ ಸರ್ಕಾರವು ಬ್ಯಾಂಕಿಂಗ್ ಕಾಯ್ದೆಗೆ ತಿದ್ದುಪಡಿ ತಂದು ನಿರ್ದೇಶಕರ ಕಾಲಾವಧಿ Two Terms or Ten Years ಎಂದು ಸ್ಪಷ್ಟಪಡಿಸಿರುತ್ತದೆ. ಇದು ಯಾವ ದಿನಾಂಕದಿಂದ ಜಾರಿಗೆ ಬರುತ್ತದೆ ಎಂದು ಇನ್ನು ರಿಜರ್ವ್ ಬ್ಯಾಂಕು ಸ್ಪಷ್ಟಪಡಿಸಿರುವುದಿಲ್ಲ. ಈ ಬಗ್ಗೆ ನ್ಯಾಫಕಬ್‌ನಿಂದ ತಮಗೆ ಸ್ಪಷ್ಟೀಕರಣ ನೀಡಲಾಗುತ್ತದೆ.

60ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಅಗಲಿದ ಗಣ್ಯರು, ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರುಗಳಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮಹಾಸಭೆಯಲ್ಲಿ ರಾಜ್ಯದ ಹೆಚ್ಚು ಠೇವಣಿ ಹೊಂದಿರುವ ಮೂರು ಬ್ಯಾಂಕುಗಳನ್ನು ಸನ್ಮಾನಿಸಲಾಯಿತು. ಅತಿ ಹೆಚ್ಚು ಠೇವಣಿ ಸಂಗ್ರಹದಲ್ಲಿ ಪ್ರಥಮ ಸ್ಥಾನ ಹೊಂದಿರುವ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕಿಗೆ ಪ್ರಥಮ ಸ್ಥಾನ, ಅತಿ ಹೆಚ್ಚು ಠೇವಣಿ ಸಂಗ್ರಹದಲ್ಲಿ ದ್ವಿತೀಯ ಸ್ಥಾನ ಹೊಂದಿರುವ ಬೆಂಗಳೂರು ದಿ ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು ದ್ವೀತಿಯ ಸ್ಥಾನ, ಅತಿ ಹೆಚ್ಚು ಠೇವಣಿ ಸಂಗ್ರಹದಲ್ಲಿ ತೃತೀಯ ಸ್ಥಾನ ಹೊಂದಿರುವ ದಿ ಶಿರಸಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಶಿರಸಿ ತೃತೀಯ ಸ್ಥಾನ ನೀಡಿ ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಅಂಬ್ರೆಲಾ ಅರ್ಗನೈಜೇಷನ್ ಸಂಸ್ಥೆಗೆ ರೂ.1 ಕೋಟಿಗಿಂತ ಹೆಚ್ಚಿನ ಷೇರು ನೀಡಿದ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು, ಬಾಗಲಕೋಟೆ ಶ್ರೀ ಬಸವೇಶ್ವರ ಕೋ-ಆಪರೇಟಿವ್ ಬ್ಯಾಂಕ್ ಲಿ., ಮತ್ತು ವಿಕಾಸ ಸೌಹಾರ್ದ ಸಹಕಾರ ಬ್ಯಾಂಕ್ ಲಿ., ಹೊಸಪೇಟೆ ಈ ಮೂರು ಪಟ್ಟಣ ಸಹಕಾರ ಬ್ಯಾಂಕುಗಳನ್ನು ಸನ್ಮಾನಿಸಲಾಯಿತು. ಮಹಾಮಂಡಳದ ಉಪಾಧ್ಯಕ್ಷರಾದ ಬಿ.ಎಸ್. ಪರಮಶಿವಯ್ಯ, ಮಹಾಮಂಡಳದ ನಿರ್ದೇಶಕರುಗಳಾದ ರುದ್ರೇಗೌಡ, ಅಶೋಕ ಎಂ.ಮನಗೂಳಿ, ಕೋಗುಂಡಿ ಬಕ್ಕೇಶಪ್ಪ, ಬಸವರಾಜ ಈಶ್ವರಪ್ಪಾ ಕಲ್ಯಾಣಶೆಟ್ಟಿ, ಕೃಷ್ಣಮೂರ್ತಿ ಭಂಡಾರಿ, ಮಲಕಣ್ಣ ಡಿ. ಪಾಟೀಲ, ಎಸ್.ಆರ್. ಹರೀಶ್ ಆಚಾರ್, ರಾಜಕುಮಾರ


















# ಮಹಾಮಂಡಳದ ಸರ್ವಸದಸ್ಯರ ವಾರ್ಷಿಕ ಮಹಾಸಭೆ

...ಹಿಂದಿನ ಪುಟದಿಂದ



ಬಸವರಾಜ ಬಾದವಾಡಗಿ, ಡಾ. ಎಂ.ಬಿ. ಮಂಜೇಗೌಡ, ಕೋದಂಡರಾಮ ಬಿ, ಪಿ.ಜನಾರ್ಧನ, ಶ್ರೀಮತಿ ಮಲ್ಲಮ್ಮಾ ಶಿ. ಯಾಳವಾರ, ವಿಶೇಷ ಆಹ್ವಾನಿತರಾದ ಎಂ.ಕೆ. ಪಟ್ಟಣಶೆಟ್ಟಿ, ರಘುನಾಥ ಸಿ., ವಿಜಯಾನಂದ ಬ. ಹೊಸಕೋಟಿ ಶಿಕ್ಷಣನಿಧಿ ಸಲಹಾ ಸಮಿತಿ ಸದಸ್ಯರುಗಳಾದ ಪಿ.ಎಲ್. ವೆಂಕಟರಾಮರೆಡ್ಡಿ, ವಿಕ್ರಮ ಆರ್. ಸಿರೂರ, ಎಂ.ಎಂ.ಮೆಟಗುಡ್ಡ, ಬಿ.ಎನ್. ಲೋಕೇಶ್, ಚಂದ್ರಮೌಳಿ ಎಸ್., ಷಣ್ಮುಖಪ್ಪ ಎಸ್. ಮುಚ್ಚಂಡಿ, ಆರ್.ಎಸ್. ಸುಬ್ರಹ್ಮಣ್ಯ, ಶರಣಪ್ಪ ಎಸ್. ವಾರದ, ಹೆಚ್. ಎಸ್. ನಾಗರಾಜಯ್ಯ, ಮಹದೇವಸ್ವಾಮಿ ಕೆ.ಎಸ್ ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಮಹಾಮಂಡಳದ ನಿರ್ದೇಶಕರಾದ ಶ್ರೀ ರುದ್ರೇಗೌಡರು ಎಲ್ಲರನ್ನು ಸ್ವಾಗತಿಸಿದರು. ಸಭೆಯಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ವಿಷಯವನ್ನು ಮಂಡಿಸಿದರು. ಕೊನೆಯಲ್ಲಿ ಮಹಾಮಂಡಳದ ನಿರ್ದೇಶಕರಾದ ರಾಜಕುಮಾರ ಬಸವರಾಜ ಬಾದವಾಡಗಿ ರವರು ವಂದನಾರ್ಪಣೆ ಸಲ್ಲಿಸಿದರು. ಮಹಾಸಭೆಯಲ್ಲಿ 180ಕ್ಕೂ ಹೆಚ್ಚು ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ



ರೈಲ್ವೆ ಕೋ-ಆಪರೇಟಿವ್ ಬ್ಯಾಂಕಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಅಧ್ಯಕ್ಷರಾದ ಎಂ.ಬಿ. ಮಂಜೇಗೌಡ ರವರು ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ.ಪಾಟೀಲರಿಗೆ ಸಲ್ಲಿಸಿದರು.



ಉಡುಪಿ ಕೋ-ಆಪರೇಟಿವ್ ಟೌನ್ ಬ್ಯಾಂಕಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಚ್.ಜಯಪ್ರಕಾಶ್ ಕೆದ್ಲಾಯ ರವರು ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರಿಗೆ ಸಲ್ಲಿಸಿದರು.



ದಿ ಬೈಲಹೊಂಗಲ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ನಿರ್ದೇಶಕರಾದ ಶ್ರೀ ಎಂ.ಎಂ. ಮೆಟಗುಡ್ಡ ರವರು ಮಹಾಮಂಡಳದ ನಿರ್ದೇಶಕರಾದ ಶ್ರೀ ರುದ್ರೇಗೌಡ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರಿಗೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳದ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ಷಣ್ಮುಖಪ್ಪ ಮುಚ್ಚಂಡಿ ರವರು ಉಪಸ್ಥಿತರಿದ್ದರು.



ದಿ ಜನತಾ ಕೋ-ಆಪರೇಟಿವ್ ಬ್ಯಾಂಕಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಅಧಿಕಾರಿಗಳಾದ ಶ್ರೀ ಡಿ.ಎನ್. ಸುರೇಶ್ ಮತ್ತು ಶ್ರೀ ಗಿರೀಶ್ ಜಿ ರವರುಗಳು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರಿಗೆ ಸಲ್ಲಿಸಿದರು.

## ದಿ ಬೈಲಹೊಂಗಲ ಅರ್ಬನ್ ಕೋ–ಆಪ್ ಬ್ಯಾಂಕಿನ 100ನೇ ವಾರ್ಷಿಕ ಮಹಾಸಭೆ




**ಬೈಲಹೊಂಗಲ:** ದಿನಾಂಕ 13.09.2025 ರಂದು ದಿ ಬೈಲಹೊಂಗಲ ಅರ್ಬನ್ ಕೋ–ಆಪ್ ಬ್ಯಾಂಕಿನ 100ನೇ ವಾರ್ಷಿಕ ಸರ್ವಸಾಧಾರಣ ಸಭೆಯು ಶ್ರೀ ಬಿ.ಬಿ. ಗಣಾಚಾರಿ ಕಲ್ಯಾಣ ಮಂಟಪ, ಮುರಗೋಡ ರಸ್ತೆ, ಬೈಲಹೊಂಗಲ ಇಲ್ಲಿ ಜರುಗಿತು.

1925ರಿಂದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ವಿಶೇಷವಾಗಿ ಗುರುತಿಸಲ್ಪಟ್ಟಿರುವ ಪ್ರತಿಷ್ಠಿತ ದಿ ಬೈಲಹೊಂಗಲ ಅರ್ಬನ್ ಕೋ–ಆಪ್ ಬ್ಯಾಂಕ ಲಿ., ಬೈಲಹೊಂಗಲ 2024–25ನೇ ಸಾಲಿನಲ್ಲಿ 7 ಕೋಟಿ 30 ಲಕ್ಷ ಒಟ್ಟು ಲಾಭಗಳಿಸಿ ಎಲ್ಲ ಪ್ರಾವೀಜನ್ ಮತ್ತು ಆದಾಯ ತೆರಿಗೆ ಪಾವತಿಸಿದ ನಂತರ ರೂ.1 ಕೋಟಿ 80 ಲಕ್ಷ ನಿವ್ವಳ ಲಾಭ ಗಳಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷರಾದ ಡಾ. ಬಿ.ಎಚ್.ಮೆಟಗುಡ್ಡ ವಾರ್ಷಿಕ ಸರ್ವಸಾಧಾರಣ ಸಭೆಯಲ್ಲಿ ತಿಳಿಸಿದರು.

ಬ್ಯಾಂಕಿನ ಠೇವು ರೂ. 419.94 ಕೋಟಿ ಸಾಲ–ಮುಂಗಡಗಳು ರೂ. 278.76 ಕೋಟಿಗಳಿಗೆ ತಲುಪಿದೆ ಶೇರು ಭಂಡವಾಳ ಮತ್ತು ಸ್ವಂತ ನಿಧಿಗಳು ರೂ. 48.00 ಕೋಟಿ ಮತ್ತು ದುಡಿಯುವ ಬಂಡವಾಳ ರೂ. 476.75 ಕೋಟಿಗಳಾಗಿರುತ್ತದೆ, ನಿವ್ವಳ ಎನ್.ಪಿ.ಎ ಶೇ. 0 ಇರುತ್ತದೆ. ಹಾಗೂ ಬ್ಯಾಂಕಿನ ಒಟ್ಟು ವ್ಯವಹಾರ 700 ಕೋಟಿಗೆ ಸಮೀಪಿಸಿರುತ್ತದೆ.

ಬ್ಯಾಂಕು ಸಮಾಜಮುಖಿಯಾಗಿ ತನ್ನ ಕಾರ್ಯನಿರ್ವಹಿಸುತ್ತದೆ. ಬ್ಯಾಂಕಿನ ಖಾಯಂ ಸದಸ್ಯರ ಮಕ್ಕಳಿಗೆ ಪ್ರತಿ ವರ್ಷ ದ್ವಿತಿಯ ಪಿಯುಸಿಯಲ್ಲಿ 90% ಕ್ಕಿಂತ ಹೆಚ್ಚಿನ ಅಂಕ ಪಡೆದ 5 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ರೂ.5000/– ಮತ್ತು ಸತ್ಕಾರ ಸಮಾರಂಭ ಕಾರ್ಯಕ್ರಮವನ್ನು ಪುರಸ್ಕರಿಸುವ ಪರಿಪಾಠ ಹಾಕಿಕೊಂಡಿದೆ ಹಾಗೂ ಬ್ಯಾಂಕಿನ ಸದಸ್ಯರು ಮರಣ ಹೊಂದಿದಲ್ಲಿ ಮರಣೋತ್ತರ ನಿಧಿ ರೂ. 5000/– ನೀಡುತ್ತಿವೆ ಹಾಗೂ ಬ್ಯಾಂಕಿನ ಸದಸ್ಯರ ಸದಸ್ಯತ್ವ 25 ವರ್ಷ ಪೂರೈಸಿದ ಸದಸ್ಯರಿಗೆ ರೂ. 1000/– ಗೌರವಧನ ನೀಡುತ್ತಿದೆ. ಜನತೆಯ ಅಗತ್ಯಕ್ಕೆ ಸ್ಪಂದಿಸಿ ತನ್ನ ಸಾಮಾಜಿಕ ಬದ್ಧತೆಯನ್ನು ನಿರ್ವಹಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾರ್ಷಿಕ ಸರ್ವಸಾಧಾರಣಾ ಸಭೆಯ ಅಧ್ಯಕ್ಷತೆಯನ್ನು ಡಾ. ಬಿ.ಎಸ್. ಮಹಾಂತಶೆಟ್ಟಿ ವಹಿಸಿದ್ದರು, ಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಡಾ. ಬಿ.ಎಚ್. ಮೆಟಗುಡ್ಡ ಮತ್ತು ಉಪಾಧ್ಯಕ್ಷರಾದ ಶ್ರೀ ಎಮ್.ಆರ್.ಬೋಳನ್ನವರ ಹಾಗೂ ನಿರ್ದೇಶಕರಗಳಾದ ಶ್ರೀ ಎಮ್.ಎಮ್.ಮೆಟಗುಡ್ಡ, ಶ್ರೀ ಸಿ.ಸಿ.ಹೊಂಡದಕಟ್ಟಿ, ಶ್ರೀ ಎ.ಎಸ್.ಮೆಟಗುಡ್ಡ, ಶ್ರೀ ಎಸ್.ಬಿ.ಪತ್ತೆನ್ನವರ, ಶ್ರೀ ಆರ್.ಎಮ್.ಮೆಟಗುಡ್ಡ, ಶ್ರೀ ಬಿ.ವಿ.ಸಾಲಿಮಠ, ಶ್ರೀ ಸಿ.ವಿ.ಹೊಸೂರ, ಶ್ರೀ ಎಮ್. ಎ. ನಾಯಕ, ಶ್ರೀ ವಿ.ಎಸ್. ಮೆಟಗುಡ್ಡ, ಶ್ರೀ ಜಿ.ಸಿ.ಮೆಟಗುಡ್ಡ, ಶ್ರೀ ವಿ.ಎಸ್.ಬೆಳವಡಿ, ಶ್ರೀ ಬಿ.ಬಿ.ಮಡಿವಾಳರ, ಶ್ರೀ ಬಿ.ವಾಯ್.ಬೆಟಗೇರಿ, ಶ್ರೀ ಎ.ಮ್. ಮೆಟಗುಡ್ಡ, ಶ್ರೀ ಎಸ್.ಬಿ.ಮೆಟಗುಡ್ಡ, ಶ್ರೀಮತಿ ಆರ್.ಎಸ್. ಬಿಳ್ಳೂರ, ಶ್ರೀಮತಿ ಕೆ.ಎಮ್.ಹೊಸೂರ, ಶ್ರೀ ಎಸ್.ಜಿ. ಬೂದಯ್ಯನವರ ಮಠ, ಶ್ರೀ ಎಸ್.ಎಸ್. ಭಾವಿಹಾಳ ಹಾಗೂ ಎಲ್ಲ ಶಾಖೆಗಳ ಸಲಹಾ ಸಮಿತಿ ಸದಸ್ಯರು, ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಎಸ್.ಬಿ. ಗೀರನವರ ಮಾಜಿ ಶಾಸಕರಾದ ಶ್ರೀ ಜಗದೀಶ ಚ.ಮೆಟಗುಡ್ಡ, ಉದ್ದಿಮೆದಾರರಾದ ಶ್ರೀ ವಿಜಯ ಎಸ್. ಮೆಟಗುಡ್ಡ, ಬ್ಯಾಂಕಿನ ಎಲ್ಲ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಬೆಂಗಳೂರಿನ ದಿ ಗ್ರೈನ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕಿನ 96ನೇ ವಾರ್ಷಿಕ ಸರ್ವಸದಸ್ಯರ ಸಭೆ



ಬೆಂಗಳೂರು: ದಿ ಗ್ರೈನ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು ಇದರ 2024–25ನೇ ಸಾಲಿನ 96ನೇ ವಾರ್ಷಿಕ ಸರ್ವಸದಸ್ಯರ ಸಭೆಯು ದಿನಾಂಕ:07.09.2025ರಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಆರ್. ಆನಂದಬಾಬುರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಸುಮಾರು 2800 ಸದಸ್ಯರು ಹಾಜರಿದ್ದು, ಈ ಸಂದರ್ಭದಲ್ಲಿ 160 ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಸುಮಾರು ರೂ. 5.25 ಲಕ್ಷಗಳ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಈ ಸಭೆಗೆ ಮುಖ್ಯ ಅತಿಥಿಗಳಾಗಿ ಹಾಜರಿದ್ದ ಶ್ರೀ ಎನ್.ವೆಂಕಟೇಶ್, ಕೆ.ಸಿ.ಎಸ್. ಸಹಕಾರ ಸಂಘಗಳ ಜಂಟಿ ನಿಬಂಧಕರು, ಪಟ್ಟಣ ಬ್ಯಾಂಕುಗಳ ವಿಭಾಗ, ಬೆಂಗಳೂರು ಹಾಗೂ ಶ್ರೀ ಜಿ. ಪಳನಿರಾಜ್ Retd.AGM, Union Bank of India, CBI/NIA-MHA-ND Existing DYSP ರವರುಗಳನ್ನು ಸನ್ಮಾನಿಸಲಾಯಿತು.

ಬ್ಯಾಂಕ್ 2024–25ನೇ ಸಾಲಿಗೆ ಗರಿಷ್ಠ ರೂ.306.64ಲಕ್ಷ ಹಾಗೂ ನಿವ್ವಳ ಲಾಭ ರೂ.266.08ಲಕ್ಷ ಗಳಿಸಿದ್ದು, ಬ್ಯಾಂಕ್ ಗಳಿಸಿದ ಲಾಭದಲ್ಲಿ ಸದಸ್ಯರುಗಳಿಗೆ ಶೇ.18ರಂತೆ ರೂ.151.43ಲಕ್ಷಗಳ ಡಿವಿಡೆಂಡ್ ಘೋಷಿಸಲಾಯಿತು.

## ಸಿದ್ಧಗಂಗಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ 32ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆ



ದಿನಾಂಕ 14.09.2025 ರಂದು ನಡೆದ ತುಮಕೂರಿನ ಸಿದ್ಧಗಂಗಾ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ 32 ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಟಿ. ಕೆ. ನಂಜುಂಡಪ್ಪನವರು ಉದ್ಘಾಟಿಸಿದರು.

**ತುಮಕೂರು:** ತುಮಕೂರು ನಗರದ ಸಿದ್ಧಗಂಗಾ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಪರಮ ಪೂಜ್ಯ ಡಾ॥ ಶ್ರೀ ಶ್ರೀ ಶಿವಕುಮಾರಮಹಾಸ್ವಾಮಿಗಳವರ ಅಮೃತ ಹಸ್ತದಿಂದ ದಿನಾಂಕ 02.02.1995 ರಲ್ಲಿ ಪ್ರಾರಂಭವಾಗಿ 31 ನೇ ವರ್ಷದಲ್ಲಿ ಮುನ್ನಡೆಯುತ್ತಿದ್ದು 32ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ಎಸ್. ಐ. ಟಿ ಬಿರ್ಲಾ ಸಭಾಂಗಣ, ತುಮಕೂರು ಇಲ್ಲಿ ದಿನಾಂಕ 14.09.2025 ರ ಭಾನುವಾರದಂದು ನೆರವೇರಿತು. ಇದರ ಅಧ್ಯಕ್ಷತೆಯನ್ನು ವಹಿಸಿದ್ದ ಅಧ್ಯಕ್ಷರಾದ ಶ್ರೀ ಟಿ. ಕೆ.ನಂಜುಂಡಪ್ಪವರು ಮಾತನಾಡಿ ನಮ್ಮ ಬ್ಯಾಂಕು ತುಮಕೂರಿನ ಪ್ರತಿಷ್ಠಿತ ಬ್ಯಾಂಕುಗಳಲ್ಲಿ ಒಂದಾಗಿದ್ದು ಪ್ರಸಕ್ತ ಸಾಲಿನಲ್ಲಿ ಒಟ್ಟು ರೂ. 8,52,30,575.38 ಲಾಭ ಗಳಿಸಿ ಸಹಕಾರ ಕ್ಷೇತ್ರದಲ್ಲಿ ಯಶಸ್ವಿಯಾಗಿ ಮುನ್ನಡೆಯುತ್ತಿದ್ದು ವರದಿ ಸಾಲಿನಲ್ಲಿ ನಿವ್ವಳ ಎನ್.ಪಿ.ಎ ಶೇಕಡ ಶೂನ್ಯ ಆಗಿದೆ. ವರದಿ ಸಾಲಿನ ನಿವ್ವಳ ಲಾಭ ಅವಕಾಶಗಳ ನಂತರ ರೂ. 3,07,33,836.38 ಇದ್ದು, 15% ಡಿವಿಡೆಂಡ್ ಅನ್ನು ಘೋಷಿಸಲಾಯಿತು. ಭಾರತೀಯ ರಿಜರ್ವ್ ಬ್ಯಾಂಕಿನಿಂದ (FSWM) "ಆರ್ಥಿಕವಾಗಿ ಸದೃಢ ಮತ್ತು ಉತ್ತಮವಾಗಿ ಕಾರ್ಯ ನಿರ್ವಹಿಸುವ ಪಟ್ಟಣ ಸಹಕಾರ ಬ್ಯಾಂಕು" ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಸಭೆಗೆ ತಿಳಿಸಿದರು.ಈ ಸಭೆಯಲ್ಲಿ 2024–2025 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಯಲ್ಲಿ ಶೇ 90% ಕ್ಕಿಂತ ಹೆಚ್ಚಿನ ಅಂಕ ಪಡೆದು ಉತ್ತೀರ್ಣರಾದ ಸದಸ್ಯರ ಮಕ್ಕಳುಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.



ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಮುನ್ನ ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರಾದ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ಪಾದಪೂಜೆಯನ್ನು ನೆರವೇರಿಸಿ ಶ್ರೀ ಸಿದ್ಧಗಂಗಾ ಮಠದ ದಾಸೋಹ ನಿಧಿಗಾಗಿ ಕಾಣಿಕೆಯನ್ನು ಸಮರ್ಪಿಸಲಾಯಿತು.

ಈ ಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಟಿ. ಕೆ. ನಂಜುಂಡಪ್ಪನವರು ಉಪಾಧ್ಯಕ್ಷರಾದ ಶ್ರೀ ಕೆ.ಎಸ್. ಶಂಕರಯ್ಯನವರು ವ್ಯವಸ್ಥಾಪನಾ ಮಂಡಳಿ ಅಧ್ಯಕ್ಷರು ಮತ್ತು ಬ್ಯಾಂಕಿನ ನಿರ್ದೇಶಕರಾದ ಶ್ರೀ ಬಿ. ಎಸ್. ರುದ್ರೇಶಯ್ಯನವರು, ನಿರ್ದೇಶಕರುಗಳಾದ ಶ್ರೀ ಮಹೇಶಪ್ಪನವರು, ಡಾ. ಎಸ್. ಪರಮೇಶ್ರವರು, ಡಾ. ಆರ್. ಸಿ. ಪುಟ್ಟಬುದ್ಧಿರವರು, ಡಾ. ಶಿವಕುಮಾರಯ್ಯನವರು, ಶ್ರೀ ಟಿ. ಎಂ. ಸ್ವಾಮಿರವರು, ಶ್ರೀ ಆರ್. ಚಿಕ್ಕಯ್ಯನವರು, ಶ್ರೀ ಎಸ್. ವಿಶ್ವನಾಥ್ರವರು ಚಾರ್ಟರ್ಡ್ ಅಕೌಂಟೆಂಟ್, ಶ್ರೀ ಕೆ.ಎಂ.ಸ್ವಾಮಿರವರು, ಶ್ರೀ ರಾಮಯ್ಯನವರು, ಶ್ರೀಮತಿ ಮಂಜುಳಪ್ರಸಾದ್ರವರು, ಡಾ. ಎಸ್. ರೇಣುಕ ಲತಾರವರು, ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳಾದ ಶ್ರೀ ಎಸ್. ವಿಶ್ವನಾಥಯ್ಯನವರು, ಪ್ರೊ. ಪಿ. ಪರಮಶಿವಯ್ಯನವರು, ಶ್ರೀ ಸಿ. ಆರ್. ರಮೇಶ್ರವರು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಹೆಚ್. ಕೆ. ಶಿವಪ್ರಕಾಶ್ರವರು, ಬ್ಯಾಂಕಿನ ಸದಸ್ಯರುಗಳು ಮತ್ತು ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

## ಮಹಾವೀರ ಬ್ಯಾಂಕಿಗೆ 83.50 ಲಕ್ಷ ರೂ. ಲಾಭ



**ಬೆಳಗಾವಿ:** ಮಹಾವೀರ ಕೋ–ಆಫ್ ಬ್ಯಾಂಕಿನ 52ನೇ ವಾರ್ಷಿಕ ಸರ್ವ ಸಾಧಾರಣ ಸಭೆಯು ಬೆಳಗಾವಿ ನಗರದ ಹಿಂದವಾಡಿಯಲ್ಲಿರುವ ಮಹಾವೀರ ಭವನದ ಸಭಾಂಗಣದಲ್ಲಿ ಅಧ್ಯಕ್ಷರಾದ ಶ್ರೀ ಎಸ್.ಎಸ್.ಖೇಮಲಾಪುರೆ ಇವರ ಉಪಸ್ಥಿತಿಯಲ್ಲಿ 13ನೇ ಸೆಪ್ಟೆಂಬರ, 2025 ರಂದು ಜರುಗಿತು ಹಾಗೂ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಎಸ್.ಡಿ.ಶಿರಗುಪ್ಪೆ ಇವರು ಎಲ್ಲ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು.

ಬ್ಯಾಂಕಿನ ಲಾಭ ಹಾನಿ ಹಾಗೂ ಆಢಾವೆ ಪತ್ರಿಕೆಗಳನ್ನು ಬ್ಯಾಂಕಿನ ವ್ಯವಸ್ಥಾಪನಾ ಮಂಡಳಿಯ ಸದಸ್ಯರಾದ ಶ್ರೀ ಶ್ರೇಣಿಕ ಸುಹಾಸ ಲೆಂಗಡೆ ಇವರು ಓದಿ ಸಭೆಗೆ ತಿಳಿಸಿದರು. ಬ್ಯಾಂಕಿನ ಶೇರು ಬಂಡವಾಳ ರೂ 269.07 ಲಕ್ಷಗಳು, ಕಾಯ್ದಿರಿಸಿದ ನಿಧಿ ರೂ.1237.10 ಲಕ್ಷಗಳು, ರೂ.16659.82 ಲಕ್ಷಗಳಷ್ಟು ಠೇವಣಿ ಹೊಂದಿದೆ, 7419.50 ಲಕ್ಷ ರೂ ಹೂಡಿಕೆ ಮಾಡಲಾಗಿದೆ, ರೂ.9688.10 ಲಕ್ಷ ವಿತರಿಸಲಾದ ಸಾಲ ಬಾಕಿ ಇದ್ದು, ಪ್ರಸಕ್ತ ವರ್ಷದಲ್ಲಿ ರೂ. 83.50 ಲಕ್ಷಗಳಷ್ಟು ಲಾಭಗಳಿಸಿದೆ ಎಂದು ತಿಳಿಸಿ, ಹಾಗೂ ಬ್ಯಾಂಕಿನ ಸದಸ್ಯರಿಗೆ ಶೇ. 12% ರಂತೆ ಲಾಭಾಂಶ ಹಂಚಲು ನಿರ್ಧರಿಸಲಾಗಿದೆ.

ಎಸ್.ಎಸ್.ಎಲ್.ಸಿ., ದ್ವಿತೀಯ ಪಿ.ಯು.ಸಿ ಹಾಗೂ ಉನ್ನತ ಶಿಕ್ಷಣದಲ್ಲಿ ಹೆಚ್ಚು ಅಂಕ ಗಳಿಸಿ ಉತ್ತೀರ್ಣರಾದ ಸದಸ್ಯರ ಮಕ್ಕಳಿಗೆ ಗೌರವಿಸಲಾಯಿತು. ಬ್ಯಾಂಕಿನ ಹಿರಿಯ ಸದಸ್ಯರನ್ನು ಸನ್ಮಾನಿಸಲಾಯಿತು.

ಬ್ಯಾಂಕಿನ ನಿರ್ದೇಶಕರಾದ ಶ್ರೀ ಎ. ಬಿ. ಪಾಟೀಲ, ಶ್ರೀ ಯು.ಟಿ. ಕೊಲ್ಹಾಪುರೆ, ಶ್ರೀ ಬಿ.ಬಿ.ಪುಜಾರ, ಶ್ರೀ ಎಸ್.ಬಿ. ನಿಲಜಗಿ, ಶ್ರೀ ಬಿ .ಬಿ. ಮಿರ್ಜಿ, ಶ್ರೀ ಎಚ್. ಎಮ್.ಕಲಮನಿ, ಶ್ರೀ ಟಿ.ಬಿ. ಪಾಟೀಲ, ಶ್ರೀಮತಿ ಪದ್ಮಾ ಬಿ. ವನಕುದರೆ, ಶ್ರೀಮತಿ ಎ.ಎಸ್.ಪಾಟೀಲ, ಶ್ರೀ ಎ.ವ್ಹಿ.ಪಾಟೀಲ, ಶ್ರೀ ವಿ.ಎಫ್. ಅನಗೋಳ ಮತ್ತು ಶ್ರೀ ಜೆ.ಕೆ. ಬಡಿಗೇರ ಹಾಗೂ ಬ್ಯಾಂಕಿನ ವ್ಯವಸ್ಥಾಪನಾ ಮಂಡಳಿಯ ಸದಸ್ಯರಾದ ಶ್ರೀ ಎಸ್.ಎಸ್. ಮಿರ್ಜಿ, ಶ್ರೀ ಎಸ್.ಎಸ್.ಲೆಂಗಡೆ ಮತ್ತು ಶ್ರೀ ಬಿ. ಡಿ. ನಿಲಜಗಿ ಉಪಸ್ಥಿತರಿದ್ದರು.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನಲ್ಲಿ ದಫೇದಾರ ಹಾಗೂ ಸೇವಕ –ವಾಹನ ಚಾಲಕರಾಗಿ ಸಿಬ್ಬಂದಿಗಳು ಸುಮಾರು 22 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಿಬ್ಬಂದಿಗಳು ಡಿಪ್ಲೋಮಾ ಇನ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ಪಡೆದುಕೊಂಡಿದ್ದರೂ ಮುಂದಿನ ಹುದ್ದೆಗೆ ಪದೋನ್ನತಿ ನೀಡಲು ಇರಬೇಕಾದ ಕನಿಷ್ಠ ವಿದ್ಯಾರ್ಹತೆ ಹೊಂದಿಲ್ಲ. ಇವರಿಗೆ ಪದೋನ್ನತಿ ನೀಡಬಹುದೇ ಎಂಬುದನ್ನು ಸ್ಪಷ್ಟಪಡಿಸಲು ಕೋರಿದೆ.**

**–ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ:** ಒಬ್ಬ ಸಿಬ್ಬಂದಿ ಪದೋನ್ನತಿ ಪಡೆಯಲು ಆತ ಪದೋನ್ನತಿ ಪಡೆಯುವ ಹುದ್ದೆಗೆ ಬೇಕಾದ ವಿದ್ಯಾರ್ಹತೆ ಹೊಂದಿರಬೇಕಾಗಿಲ್ಲ. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ 17(2)(ಎ) (ii) ರಲ್ಲಿ ತಿಳಿಸಿದಂತೆ, ಒಬ್ಬ ಸಿಬ್ಬಂದಿ ಈಗಿರುವ ಹುದ್ದೆಗೆ ನೇರ ನೇಮಕಾತಿಯಾಗಲು ಇರಬೇಕಾದ ಕನಿಷ್ಠ ವಿದ್ಯಾರ್ಹತೆ ಹೊಂದಿದ್ದು, ಕನಿಷ್ಠ ಐದು ವರ್ಷಗಳ ತೃಪ್ತಿದಾಯಕ ಸೇವೆಯನ್ನು ಆ ಹುದ್ದೆಯಲ್ಲಿ ನೀಡಿದ್ದರೆ ಆತ ಮುಂದಿನ ಹುದ್ದೆಗೆ ಪದೋನ್ನತಿಗಾಗಿ ಪರಿಗಣಿಸಲು ಅರ್ಹತೆ ಪಡೆಯುತ್ತಾನೆ. "ಪರಿಗಣಿಸಲು ಅರ್ಹ" ಎಂದು ಮಾತ್ರಕ್ಕೆ ಕಡ್ಡಾಯವಾಗಿ ಪದೋನ್ನತಿ ನೀಡಬೇಕೆಂದು ಅರ್ಥವಲ್ಲ. ನೀವು ತಿಳಿಸಿದ ಸಿಬ್ಬಂದಿಗಳು ಡಿಪ್ಲೋಮಾ ಹೊಂದಿರುವುದರಿಂದ, ಮೇಲೆ ತಿಳಿಸಿದ ಅರ್ಹತೆ ಹೊಂದಿದ್ದಲ್ಲಿ ಮುಂದಿನ ಹುದ್ದೆಗೆ ಪದೋನ್ನತಿಗಾಗಿ ಪರಿಗಣಿಸಲು ಅರ್ಹರು.

## ದಾವಣಗೆರೆ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ 64ನೇ ವಾರ್ಷಿಕ ಮಹಾಸಭೆ



**ದಾವಣಗೆರೆ :** ದಿ ದಾವಣಗೆರೆ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ ಇದರ 2024–25ನೇ ಸಾಲಿನ 64ನೇ ವಾರ್ಷಿಕ ಮಹಾಸಭೆಯು ದಾವಣಗೆರೆ ನಗರದ ಶ್ರೀ ಗುಂಡಿಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಯಶಸ್ವಿಯಾಗಿ ನೆರವೇರಿತು. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಬಿ.ಸಿ.ಉಮಾಪತಿಯವರು ಮತ್ತು ಹಿರಿಯ ನಿರ್ದೇಶಕರು ಹಾಗೂ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಕೋಗುಂಡಿ ಬಕ್ಕೇಶಪ್ಪನವರು ಮಾತನಾಡಿ ಬ್ಯಾಂಕಿನ ಪ್ರಗತಿಯನ್ನು ಪ್ರಸ್ತಾಪಿಸಿದ ಅವರು 2025 ರ ಮಾರ್ಚ್ ಅಂತ್ಯಕ್ಕೆ ಬ್ಯಾಂಕಿನ ಲಾಭವು ರೂ. 16.20 ಕೋಟಿ ಮೀರಿದ್ದು, ಇದು ಕಳೆದ ಸಾಲಿಗಿಂತ ರೂ. 2.65 ಕೋಟಿ ಹೆಚ್ಚಾಗಿರುತ್ತದೆ. ಠೇವಣಿಯಲ್ಲಿ ಕಳೆದ ವರ್ಷಕ್ಕಿಂತ ರೂ.55.00 ಕೋಟಿ ಹೆಚ್ಚಾಗಿದ್ದು, ಒಟ್ಟು ರೂ.600.68 ಕೋಟಿ ಸಂಗ್ರಹಿಸಿದೆ.ಸದಸ್ಯರ ಅಗತ್ಯಗನುಗುಣವಾಗಿ ರೂ.428.04 ಕೋಟಿ ಸಾಲ–ಸೌಲಭ್ಯವನ್ನು ಒದಗಿಸಲಾಗಿದ್ದು, ಇದು ಕಳೆದ ವರ್ಷಕ್ಕಿಂತ ರೂ.32.20 ಕೋಟಿ ಹೆಚ್ಚಾಗಿರುತ್ತದೆ. ಬ್ಯಾಂಕಿನ ದುಡಿಯುವ ಬಂಡವಾಳದಲ್ಲೂ ಕಳೆದ ವರ್ಷಕ್ಕಿಂತ ರೂ. 63.17 ಕೋಟಿ ವೃದ್ಧಿಯಾಗಿ ರೂ. 732.02 ಕೋಟಿ ಆಗಿರುತ್ತದೆ. ರೂ. 104.33 ಕೋಟಿ ಕಾಯ್ದಿಟ್ಟ ಮತ್ತು ಇತರೆ ನಿಧಿಗಳಾಗಿದ್ದು, ಇದು ಬ್ಯಾಂಕಿನ ಸದೃಢತೆಯನ್ನು ಬಿಂಬಿಸುತ್ತದೆಂದು ಸಭೆಯಲ್ಲಿ ತಿಳಿಸಿದರು.

ಉಪಾಧ್ಯಕ್ಷರಾದ ಶ್ರೀ ಟಿ.ಎಸ್.ಜಯರುದ್ರೇಶ್‌ರವರು ಕಳೆದ ಸಾಲಿನ ವಾರ್ಷಿಕ ಮಹಾಸಭೆಯ ನಿರ್ಣಯವನ್ನು ಓದಿದರು, ಇನ್ನೋರ್ವ ನಿರ್ದೇಶಕರಾದ ಶ್ರೀ ಅಜ್ಜಂಪುರ ಶೆಟ್ರು ವಿಜಯಕುಮಾರ್‌ರವರು ಸ್ವಾಗತ ಭಾಷಣ ಮಾಡಿದರು, ವೃತ್ತಿಪರ ನಿರ್ದೇಶಕರಾದ ಶ್ರೀ ಮುಂಡಾಸ್ ವೀರೇಂದ್ರರವರು 2024–25ನೇ ಸಾಲಿನ ವಾರ್ಷಿಕ ವರದಿಯನ್ನು ಓದಿದರು, ಇನ್ನೋರ್ವ ವೃತ್ತಿಪರ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಕಣವಿಯವರು ಪ್ರಸಕ್ತ ಸಾಲಿನಲ್ಲಿ ಬ್ಯಾಂಕು ರೂಪಿಸಿರುವ ಕಾರ್ಯಚಟುವಟಿಕೆಗಳನ್ನು ಸಭೆಗೆ ಮಂಡಿಸಿದರು. ನಿರ್ದೇಶಕರಾದ ಶ್ರೀ ಎಂ. ಚಂದ್ರಶೇಖರ್‌ರವರು ವಂದನಾರ್ಪಣೆ ಮಾಡಿದರು, ಕಾರ್ಯಕ್ರಮದ ನಿರೂಪಣೆಯನ್ನು ನಿರ್ದೇಶಕರಾದ ಶ್ರೀ ಇ. ಎಂ. ಮಂಜುನಾಥರವರು ಯಶಸ್ವಿಯಾಗಿ ನಿರ್ವಹಿಸಿದರು. ಈ ಸಾಲಿನ ಗಳಿಸಿದ ಲಾಭದಲ್ಲಿ ಸದಸ್ಯರಿಗೆ ಶೇ.16% ಡಿವಿಡೆಂಡ್ ಘೋಷಿಸಲಾಯಿತು. ನಂತರ ಬ್ಯಾಂಕಿನ ಹಿರಿಯ ನಿರ್ದೇಶಕರು ಹಾಗೂ ನಿಕಟಪೂರ್ವ ಉಪಾಧ್ಯಕ್ಷರಾದ ಶ್ರೀ ಅಂದನೂರು ಮುಪ್ಪಣ್ಣನವರು FKCCI, ಬೆಂಗಳೂರು ಇದರ ನಿರ್ದೇಶಕರಾಗಿ ಆಯ್ಕೆಯಾಗಿದ್ದರಿಂದ ಅವರನ್ನು ಸಭೆಯಲ್ಲಿ ಸನ್ಮಾನಿಸಲಾಯಿತು.

ಕಾರ್ಯನಿರ್ವಾಹಕ ಮಂಡಳಿ ಸದಸ್ಯರಾದ ಶ್ರೀ ಪಲ್ಲಾಗಟ್ಟೆ ಶಿವಾನಂದಪ್ಪನವರು, ಶ್ರೀ ದೇವರಮನಿ ಶಿವಕುಮಾರ್‌ರವರು, ಶ್ರೀಮತಿ ಸುರೇಖಾ ಎಂ. ಚಿಗಟೇರಿಯವರು, ಶ್ರೀ ಕಂಚಿಕೇರಿ ಮಹೇಶ್‌ರವರು, ಶ್ರೀ ವಿ. ವಿಕ್ರಮ್‌ರವರು, ಶ್ರೀಮತಿ ಎ.ಆರ್.ಅರ್ಚನಾರವರು, ಶ್ರೀ ಹೆಚ್.ಎಂ.ರುದ್ರಮುನಿ ಸ್ವಾಮಿಯವರು, ಶ್ರೀ ಸೋಗಿ ಮುರುಗೇಶ್‌ರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಪ್ರಧಾನ ವ್ಯವಸ್ಥಾಪಕರಾದ ಶ್ರೀ ಮಲ್ಲೇಶ್ ಬಿ. ಎಸ್ ಹಾಗೂ ಅವರ ಸಿಬ್ಬಂದಿಗಳು ಕಾರ್ಯಕ್ರಮವು ಯಶಸ್ವಿಯಾಗಲು ಎಲ್ಲಾ ಹಂತದಲ್ಲಿ ಸಹಕರಿಸಿದರು.

## ತುಮಕೂರಿನ ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕಿನ 44ನೇ ವಾರ್ಷಿಕ ಮಹಾಸಭೆ



**ತುಮಕೂರು:** ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ ನಿಯಮಿತ, ತುಮಕೂರು. ಇದರ 44ನೇ 2024–25ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ: 14/09/2025ರಂದು ಭಾನುವಾರ ತುಮಕೂರು ನಗರದ ಮಹಾವೀರ ರಸ್ತೆಯಲ್ಲಿರುವ ಮಹಾವೀರ ಭವನದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಬಿ. ವಿ. ರಾಜೇಂದ್ರಕುಮಾರ್ ರವರ ಅಧ್ಯಕ್ಷತೆಯಲ್ಲಿ ನಡೆಸಿದರು. ಉಪಾಧ್ಯಕ್ಷರಾದ ಶ್ರೀ ಸುನಿಲ್ ಕುಮಾರ್.ವಿ, ನಿರ್ದೇಶಕರುಗಳಾದ ಶ್ರೀ. ಬಿ.ಕೆ.ಪ್ರದೀಪ್, ಶ್ರೀ.ಸಿ. ಅರುಣ್ ಕುಮಾರ ಜೈನ್, ಶ್ರೀ ಎ.ಸಂತೋಷ್, ಶ್ರೀ ಮಹಾವೀರ್ ಜೈನ್, ಶ್ರೀ ಹೆಚ್.ಜೆ.ರಾಕೇಶ್ ಕುಮಾರ್, ಶ್ರೀ ಹೆಚ್.ವಿ.ರಾಜಣ್ಣ, ಶ್ರೀ.ಎಲ್.ದೇವೇಂದ್ರನಾಥ್, ಶ್ರೀ ಎ. ವೈ. ಬ್ರಹ್ಮಪ್ರಕಾಶ್, ಶ್ರೀ ಅಭಯ ಕುಮಾರ್ ಎ.ಜೆ., ಶ್ರೀ ಜಿನೇಶ್ ಎಸ್.ಡಿ, ಶ್ರೀಮತಿ ಸುಜಾತಾ ಸುಮತಿ ಕುಮಾರ್, ಶ್ರೀಮತಿ ಮಾನಸ ಪಿ, ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಜ್ವಾಲಾ ಪ್ರಸಾದ್ ರವರು ಸಿಬ್ಬಂದಿ ವರ್ಗದವರು ಯಶಸ್ವಿಯಾಗಿ ನಡೆಸಿಕೊಟ್ಟರು.

ಇದೇ ಸಂದರ್ಭದಲ್ಲಿ ಅಧ್ಯಕ್ಷರು ಬ್ಯಾಂಕ್ 2024–25ನೇ ಸಾಲಿನಲ್ಲಿ ಆದಾಯ ತೆರಿಗೆ ಪಾವತಿಸಿದ ನಂತರ ರೂ.86.33 ಲಕ್ಷಗಳ ನಿವ್ವಳ ಲಾಭ ಗಳಿಸಿ ಶೇ.12% ಡಿವಿಡೆಂಡ್ ವಿತರಿಸಲು ತೀರ್ಮಾನಿಸಲಾಗಿದೆ ಎಂದು ಮಹಾಸಭೆಯಲ್ಲಿ ಘೋಷಿಸಿದರು. 2024–25ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಗಳಲ್ಲಿ ಅತೀ ಹೆಚ್ಚು ಅಂಕಗಳಿಸಿದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ನಗದು ಬಹುಮಾನ ನೀಡಿ ಗೌರವಿಸಲಾಯಿತು.

## ಓದುಗರ ಅನಿಸಿಕೆ...




**ಅರ್ಥಪೂರ್ಣವಾಗಿದೆ:** ಸಹಕಾರ ಬ್ಯಾಂಕುಗಳು ಉಳ್ಳವರಿಗೆ ಸಾಲ ನೀಡುವುದರ ಜತೆಗೆ ಬೀದಿ ಬದಿ ವ್ಯಾಪಾರಿಗಳಿಗೂ ಸಾಲ ನೀಡಿದರೆ, ಅವರ ಆರ್ಥಿಕ ಪರಿಸ್ಥಿತಿಯೂ ಸುಧಾರಿಸಲಿದೆ. ಆ ಮೂಲಕ ಸಹಕಾರ ತತ್ವದ ಆಶಯವೂ ಈಡೇರುತ್ತದೆ. ಈ ನಿಟ್ಟಿನಲ್ಲಿ ಬ್ಯಾಂಕುಗಳು ಕಾರ್ಯನಿರ್ವಹಿಸಬೇಕು ಎಂದು ಶ್ರೀ ಎಚ್.ಕೆ.ಪಾಟೀಲರು ಸಭೆಯೊಂದರಲ್ಲಿ ಹೇಳಿರುವುದು ಅರ್ಥಪೂರ್ಣವಾಗಿದೆ.

▸▸ ವಿ ಸದಾಶಿವ ಎನ್., ಮೈಸೂರು

**ಕರ್ತವ್ಯ ನಿರ್ವಹಣೆ:** ನಮ್ಮ ರಾಜ್ಯದಲ್ಲಿರುವ ಅನೇಕ ಸಹಕಾರ ಬ್ಯಾಂಕುಗಳು ಸಹಕಾರ ತತ್ವದಡಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಹಾಗೆಯೇ ಅತ್ಯುನ್ನತ ಸಹಕಾರ ಬ್ಯಾಂಕುಗಳು ಎಂದು ಹಲವು ರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿವೆ. ಇದಕ್ಕೆ ಕಾರಣ; ಸದಸ್ಯರ, ಗ್ರಾಹಕರ ವಿಶ್ವಾಸ, ಆಡಳಿತ ಮಂಡಳಿಯ ಸೂಕ್ತ ಮಾರ್ಗದರ್ಶನ ಹಾಗೂ ಸಿಬ್ಬಂದಿಗಳ ದಕ್ಷ ಕರ್ತವ್ಯ ನಿರ್ವಹಣೆ ಎನ್ನಬಹುದಾಗಿದೆ.

▸▸ **ನಾರಾಯಣ ಭಟ್** ವಿ., ಉಡುಪಿ

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.